ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಅಂತರರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ ದಿನಾಂಕ : DATE 28/03/2019

## ಬಲವಂತದ ಮತಾಂತರ, ವಿವಾಹ: ಕಠಿಣ ಕ್ರಮಕ್ಕೆ ಮುಂದಾದ ಪಾಕಿಸ್ತಾನ

# ಅಪಹೃತ ಹಿಂದೂ ಬಾಲಕಿಗೆ ವಿವಾಹ

**ಇಸ್ಲಾಮಾಬಾದ್ (ಪಿಟಿಐ):** ಸಿಂಧ್ ಪ್ರಾಂತದ ಬದಿನ್ ಜಿಲ್ಲೆಯಿಂದ ಮಂಗಳವಾರ ಅಪಹರಣವಾಗಿದ್ದ-ಳು ಎನ್ನಲಾದ ಬಾಲಕಿಯನ್ನು ವಿವಾ-ಹವಾಗಿರುವುದಾಗಿ ವ್ಯಕ್ತಿಯೊಬ್ಬ ಹೇಳಿಕೊಂಡಿದ್ದಾನೆ.

'ಹಿಂದೂ ಯುವತಿ ಮಾರ್ಚ್ 17ರಂದು ಸಮರಾಪ್ರೊ ಪಟ್ಟಣದಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಬಳಿಕ ಆಕೆಯನ್ನು ವಿವಾಹವಾಗಿದ್ದೇನೆ. ಆಕೆಯ ತಂದೆ ಹೇಳಿರುವಂತೆ ಅಪ್ರಾಪ್ತಳಲ್ಲ. ಅವಳಿಗೆ 19 ವರ್ಷವಾಗಿದೆ' ಎಂದು ಆತ ತಿಳಿಸಿದ್ದಾನೆ.

ಡಾನ್ ಪತ್ರಿಕೆ ಈ ವಿಷಯ ವರದಿ ಮಾಡಿದೆ.

'ವಿವಾಹಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪತ್ರಕರ್ತರಿಗೆ ಕಳುಹಿಸಿದ್ದಾನೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ನಾಲ್ವರು ಸಶಸ್ತ್ರಧಾರಿಗಳು 14 ವರ್ಷದ ನನ್ನ ಮಗಳನ್ನು ಮನೆಯಿಂದ ಅಪಹರಿಸಿದ್ದಾರೆ' ಎಂದು ಬಾಲಕಿ ತಂದೆ ದೂರು ಸಲ್ಲಿಸಿದ್ದರು.

**ರಕ್ಷಣೆ ಒದಗಿಸಲು ಸೂಚನೆ:** ಇದೇ ಪ್ರಕರಣ ಸಂಬಂಧ, ಎಫ್‌ಐಆರ್ ದಾಖಲಿಸಿಕೊಳ್ಳುವಂತೆ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಹರಿರಾಮ್ ಕಿಶೋರಿ ಲಾಲ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಅಲ್ಲದೆ ಬಾಲಕಿ ಕುಟುಂಬಕ್ಕೆ ರಕ್ಷಣೆ ಒದಗಿಸುವಂತೆಯೂ ಹೇಳಿದ್ದಾರೆ.

ಘೋಟ್ಕಿ ಜಿಲ್ಲೆಯಿಂದ ಇಬ್ಬರು ಬಾಲಕಿಯರನ್ನು ಅಪಹರಣ ಮಾಡಿ, ಬಲವಂತದಿಂದ ಇಸ್ಲಾಂಗೆ ಮತಾಂತರಗೊಳಿಸಿ ವಿವಾಹ ಮಾಡಿರುವ ಪ್ರಕರಣಕ್ಕೆ ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿರುವ ನಡುವೆಯೇ ಈ ಬೆಳವಣಿಗೆಯಾಗಿದೆ.

## ಸಂಸತ್ತಿನಲ್ಲಿ ಎರಡು ಮಸೂದೆ ಮಂಡನೆ

**ಇಸ್ಲಾಮಾಬಾದ್ (ಪಿಟಿಐ):** ಬಲವಂತದ ಮತಾಂತರದಲ್ಲಿ ತೊಡಗಿದ್ದವರಿಗೆ ಹೆಚ್ಚಿನ ಶಿಕ್ಷೆ ವಿಧಿಸುವ ಹಾಗೂ ಬಾಲ್ಯ ವಿವಾಹವನ್ನು ಕಾನೂನಾರ್ಹ ಅಪರಾಧ ಎಂದು ಘೋಷಿಸುವ ಪ್ರಸ್ತಾವನೆ ಇರುವ ಎರಡು ಮಸೂದೆಗಳು ಪಾಕಿಸ್ತಾನ ಸಂಸತ್ತಿನಲ್ಲಿ ಮಂಡನೆಯಾಗಿವೆ.

ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರಿಕ್-ಎ-ಇನ್ಸಾಫ್ (ಪಿಟಿಐ) ಪಕ್ಷದ ಹಿಂದು ಸಂಸದರಾಗಿರುವ ಡಾ.ರಮೇಶ್ ಕುಮಾರ್ ವಂಕ್ವಾನಿ ಅವರು ಈ ಮಸೂದೆಗಳನ್ನು ಮಂಡಿಸಿದ್ದಾರೆ. ಇಂತಹ ಪ್ರಕರಣಗ-ಳನ್ನು ಖಂಡಿಸಿ ಎಲ್ಲಾ ಪ್ರಮುಖ ಪಕ್ಷಗಳ ಅಲ್ಪಸಂಖ್ಯಾತ ಸಂಸದರು ಕೈಗೊಂಡಿರುವ ನಿರ್ಣಯವನ್ನು ಸಹ ಮಸೂದೆ ಜತೆ ಮಂಡಿಸಲಾಗಿದೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ. ಈ ನಿರ್ಣಯದ ಮೂಲಕ, ಬಲವಂತದ ಮತಾಂತರದಲ್ಲಿ ತೊಡಗಿರುವ ವಿವಾದಾತ್ಮಕ ಧಾರ್ಮಿಕ ಮುಖಂಡರು ಸೇರಿದಂತೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

2